ಓಡಾಡಿಕೊಂಡೇ ಇರುವವನು. 'ಕಣಿವೆಯ ಕೆಳಗಿನ' ಜನರು ಹಣಕ್ಕಾಗಿ ತಮ್ಮ ಹೆಣ್ಣುಮಕ್ಕಳನ್ನು ವೃದ್ಧರಿಗೆ ಮಾರಾಟಮಾಡುತ್ತಾರೆ ಎನ್ನುವುದನ್ನು ಬಲ್ಲ ಜನಾರ್ದನಾಚಾರಿ ಆ ಕಡೆಗೆ ಹೆಚ್ಚಾಗಿ ಹೋಗುತ್ತಾ ಇರುತ್ತಾನೆ. ಅದಕ್ಕಿಂತಲೂ ಮುಖ್ಯವಾಗಿ ಅಳಿಯನ ಆಸ್ತಿಯನ್ನೆಲ್ಲ ನೋಡಿಕೊಳ್ಳುವವನು ಜನಾರ್ದನಾಚಾರ್ಯನೇ. ಹೆಚ್ಚೇನು, ಬೆಂಗಳೂರು ನಗರದಲ್ಲಿ ಇವರು ವಾಸವಾಗಿರುವ ಹಳೆಯ ಮನೆ ಅಳಿಯನಿಗೆ ಅಂದರೆ ಹೇಮಲತೆಗೆ ಸೇರಿದ್ದು. ಇಷ್ಟಿದ್ದೂ ಅವನಿಗೂ ಅಳಿಯ ತೀರಿಕೊಂಡದ್ದು ಗೊತ್ತಾಗದೆ ಇತ್ತೇ? ಅಥವಾ ಅವನಿಗೆ ಗೊತ್ತಿದ್ದರೂ ಹೆಂಡತಿ ಮಗಳಿಂದ ಅದನ್ನು ಮುಚ್ಚಿಟ್ಟಿದ್ದ ಎಂದು ಊಹಿಸೋಣವೆಂದರೆ ಅದು ಹಾಗಲ್ಲ ಎಂದೇ ಕಾದಂಬರಿ ಹೇಳುತ್ತದೆ. ಹೇಮಲತೆ ವಿಧವೆಯಾದ ಮೇಲೆ ಅವಳು ಶಾಲೆಗೆ ಹೋಗುವುದನ್ನು ನಿಲ್ಲಿಸುವುದು ಹೆತ್ತವರಿಗೆ ಅನಿವಾರ್ಯ ಆಯಿತು ಎನ್ನುವುದೇ ಕಾದಂಬರಿಯ ಕಥೆಯ ಓಟಕ್ಕೆ ಅಗತ್ಯವಾದ ಸಂಗತಿ.

ಹೇಮಲತೆಗೆ ಈಗ (ಕಥಾನಕದ ಕಾಘಟ್ಟದಲ್ಲಿ) 14 ವರ್ಷ ಪ್ರಾಯ. ಅವಳ ತಾಯಿ ಕಾಶಿಬಾಯಿ ಸ್ವಲ್ಪ ವಿವೇಕವಿರುವ ಹೆಂಗಸಾದುದರಿಂದ ಮಗಳನ್ನು ಶಾಲೆಗೆ ಕಳುಹಿಸಿರುತ್ತಾಳೆ. ಮಿಷನರಿಗಳ ಶಾಲೆಯಲ್ಲಿ ಹೇಮಲತೆ ಬುದ್ಧಿವಂತ ವಿದ್ಯಾರ್ಥಿನಿಯಾಗಿರುತ್ತಾಳೆ. ಆದರೆ, ಈಗ ಹೇಮಲತೆ ವಿಧವೆಯಾದುದು ತಿಳಿದುಬಂದದ್ದರಿಂದ ಅವಳು ಇನ್ನುಮುಂದೆ ಶಾಲೆಗೆ ಹೋಗುವಂತಿಲ್ಲ. ಇತರ ವಿಧವೆಯರಂತೆ ತಲೆ ಬೋಳಿಸಿಕೊಂಡು, ದಿನಕ್ಕೊಂದು ಊಟ ಮಾಡಿ ಸಂನ್ಯಾಸಿಗಳಂತಹ ಕಠಿಣ ವ್ರತಗಳನ್ನು ಮಾಡಿಕೊಂಡು ಇರಬೇಕಾದವಳು. ಆದರೆ, ಕಾಶೀಬಾಯಿ ಧೈರ್ಯವಹಿಸಿ ಮಗಳ ಕೇಶಮುಂಡನ ಮಾಡಿಸಲು ಒಪ್ಪುವುದಿಲ್ಲ.

ಹೇಮಲತೆಯ ಶಿಕ್ಷಕಿಯರಲ್ಲೊಬ್ಬರಾದ ವಯೋಲತ ಗುಡ್‌ವಿಲ್ (ವಯೋಲೆಟ್ ಗುಡ್‌ವಿಲ್ ಎನ್ನುವುದನ್ನು ಹೀಗೆ ಬರೆಯಲಾಗಿದೆ) ಅಥವಾ ಗುಡ್‌ವಿಲ್ ಮಿಸಿ ಶಿಕ್ಷಕಿಯಾಗಿರುವುದರ ಜತೆಗೆ 'ಜನಾನಾ ಸೂಪರೆಂಟ್' ಎಂಬ ಹುದ್ದೆಯಲ್ಲಿಯೂ ಇದ್ದಾರೆ. ಆಕೆಗೆ ಹೇಮಲತೆಯೆಂದರೆ ಅಕ್ಕರೆ. ವಿಧವೆಯಾದ ಕಾರಣ ಹೇಮಲತೆಯ ಶಾಲಾ ಶಿಕ್ಷಣ ನಿಂತುಹೋದಾಗ ಅನುಕಂಪದಿಂದ ತಾನೇ ಅವಳ ಮನೆಗೆ ಹೋಗಿ ಪಾಠಗಳನ್ನು ಕಲಿಸಿಕೊಡಲಾರಂಭಿಸುತ್ತಾರೆ. ಗುಡ್‌ವಿಲ್ ಮ್ಲೇಚ್ಛಳಾದ ಕಾರಣ ಅಸ್ಪೃಶ್ಯಳು ಎಂದು ಕಾಶಿಬಾಯಿಯ ಬ್ರಾಹ್ಮಣ ಸಮಾಜ ತಿಳಿದಿದ್ದರೂ ಕಾಶೀಬಾಯಿ ಧೈರ್ಯದಿಂದ ಮಗಳಿಗಾಗಿ ಗುಡ್‌ವಿಲ್ ಮಿಸಿ ಮನೆಗೆ ಬರಲು ಒಪ್ಪಿಗೆ ನೀಡುತ್ತಾಳೆ.

ಕಾಲೇಜೊಂದರಲ್ಲಿ ಬಿ.ಎ. ಪದವಿ ಓದುತ್ತಿರುವ ಪ್ರಭಾಕರ ಎಂಬ ವಿದ್ಯಾವಂತ ಬ್ರಾಹ್ಮಣ ಯುವಕ ಸಮಾಜ ಸುಧಾರಣೆಯಲ್ಲಿ ಆಸಕ್ತನಾಗಿದ್ದವನು. ಹಿಂದೂ ಧರ್ಮ ದೋಷಪೂರಿತವಾಗಿದೆಯೆಂದು ಮೊದಲಿನಿಂದಲೂ ಭಾವಿಸಿದ್ದವನು. ಅವನು ಸ್ತ್ರೀ ಶಿಕ್ಷಣದ ಬಗ್ಗೆ, ಕನ್ಯಾವಿಕ್ರಯದ ಬಗ್ಗೆ ಮತ್ತು ಜಾತಿ ವ್ಯವಸ್ಥೆಯ ಬಗ್ಗೆ ಪ್ರಗತಿಪರ ವಿಚಾರಗಳನ್ನು ಹೊಂದಿದ್ದಾನೆ. ಪ್ರಭಾಕರ ವಾಸಿಸುತ್ತಿದ್ದದ್ದು ಹೇಮಲತೆಯ ಮನೆಯ ಸಮೀಪವೇ. ಅವರಿಬ್ಬರಿಗೂ ಮುಖ ಪರಿಚಯ ಇತ್ತು ಮತ್ತು ಪರಸ್ಪರ ಆಕರ್ಷಣೆಯೂ ಇತ್ತು. ಪ್ರಭಾಕರನ ತಾಯಿ ಯಮುನಾಬಾಯಿ ಸಂಪ್ರದಾಯಸ್ಥೆ, ಮಹಿಳಾ ಶಿಕ್ಷಣಕ್ಕೆ ವಿರೋಧಿ. ಹೇಮಲತೆ ವಿಧವೆ ಎಂಬುದು ಪ್ರಭಾಕರನಿಗೆ ಆಗ ತಿಳಿದಿರಲಿಲ್ಲ, ಅವನು ಅವಳನ್ನು ಇಷ್ಟಪಡುತ್ತಾನೆ.

ಹೇಮಲತೆಯ ಮನೆಪಾಠ ನಿಂತುಹೋಗುತ್ತದೆ. ಒಮ್ಮೆ ಅವಳ ತಂದೆ ಜನಾರ್ದನ ಆಚಾರ್ಯನನ್ನು ನೆರೆಕರೆಯವರು ನಿಂದಿಸಿದಾಗ ಅವನು ಮಿಸಿಯು ಮನೆಗೆ ಬರಬಾರದು ಎಂದು ನಿರ್ಬಂಧಿಸಿ, ಹೇಮಲತೆಯ ಮೇಲೆ ಕಣ್ಣಿಡಲು ತನ್ನ ವಿಧವೆ ಅಕ್ಕನನ್ನು ಕರೆಸುತ್ತಾನೆ. ಕಾಶಿಬಾಯಿ ಮನೆಯಲ್ಲಿದ್ದರೆ ಮತ್ತೆ ಮಗಳಿಗೆ ಶಿಕ್ಷಣ ಕೊಡಿಸಬಹುದು ಎಂದು ಅವಳನ್ನು ಅವಳ ಅಣ್ಣನ ಮನೆಗೆ ಕಳುಹಿಸಿಬಿಡುತ್ತಾನೆ. ಮನೆಯಿಂದ ಹೊರಗೆ ಬರದಂತೆ ಅವಳನ್ನು ನಿರ್ಬಂಧಿಸಿದ್ದ ಸಮಯದಲ್ಲಿ ಗುಡ್‌ವಿಲ್ ಮಿಸಿಯು ಅವಳಿಗೆ ಬರೆದ ಪತ್ರದಲ್ಲಿ ಯಾವ ಸಾಹಿತ್ಯವನ್ನು ಓದಲು ಹೇಳುವಳೆನ್ನುವುದನ್ನು ಗಮನಿಸಬಹುದು (ಪುಟ 25):

'ಇದರೊಡನೆ ನಿಮಗೆ ಎರಡು ಪುಸ್ತಕಗಳನ್ನು ಕಳುಹಿಸಿರುತ್ತೇನೆ. ಸ್ತ್ರೀಧರ್ಮ ನೀತಿ ಎಂಬದು ಬಹಳ ನೀತಿಬೋಧಕವಾದುದು. ಪಂಡಿತ ರಮಾಬಾಯಿಯೆಂಬ ಘನವುಳ್ಳ ಸ್ತ್ರೀಯು ಅದನ್ನು ಬರೆದಿದ್ದಾರೆ, ಅದನ್ನು ಓದುತ್ತೋದುತ್ತ ಜ್ಞಾನವು ಅಭಿವೃದ್ಧಿಯಾಗುವುದು. ಗ್ರಂಥಕರ್ತೃವು ಎಂತಹ